ಲೈಂಗಿಕ ಶಿಕ್ಷಣವನ್ನು ಪಠ್ಯಕ್ರಮದ ಭಾಗವಾಗಿ ಮಾಡಬೇಕು, ಅದಕ್ಕೆ ಅಂಕಗಳನ್ನು ಇರಿಸುವುದು ಸರಿಯಲ್ಲ. ಆದರೆ ಅದು ಗಣಿತ, ವಿಜ್ಞಾನ ಪಾಠಗಳಷ್ಟೇ ಅಥವಾ ಅದಕ್ಕಿಂತಲೂ ಮುಖ್ಯವಾದುದು ಎಂಬ ಅರಿವು ಬೋಧಕರಿಗೂ ಪೋಷಕರಿಗೂ ಇರಬೇಕು. ಆಗ ಮಕ್ಕಳೂ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸುತ್ತಾರೆ. ಸರಿಯಾದ ಶಿಕ್ಷಣ ದೊರೆತರೆ ಲೈಂಗಿಕ ವಿಚಾರಗಳ ಕುತೂಹಲಗಳನ್ನು ಮುಕ್ತವಾಗಿ ಚರ್ಚಿಸಲು ಮಕ್ಕಳು ಮುಂದಾಗುತ್ತಾರೆ. ಪೋರ್ನ್ ಸೈಟ್‌ಗಳನ್ನು ನೋಡುವ ಅಥವಾ ಓದುವ ಮೂಲಕ ಅವರು ತಮ್ಮ ಹದಿಹರೆಯದ ಸಹಜ ಕುತೂಹಲವನ್ನು ತಣಿಸಿಕೊಳ್ಳಲು ಪ್ರಯತ್ನಿಸಬಹುದು. ಆದರೆ ಅಂಥ ಜಾಲತಾಣಗಳಲ್ಲಿ ತಪ್ಪು ಸಂದೇಶಗಳಿರುತ್ತವೆಯೇ ಹೊರತು ಆರೋಗ್ಯಕರ ಮಾಹಿತಿಗಳಿರುವುದಿಲ್ಲ. ಅವು, 'ಹುಡುಗಿಯ ಒಪ್ಪಿಗೆ ಎಂಬುದಕ್ಕೆ ಬೆಲೆ ಕೊಡಬೇಕಾಗಿಲ್ಲ. ಅವಳ ಒಪ್ಪಿಗೆ ಇದ್ದೇ ಇರುತ್ತದೆ' ಎಂಬ ಭಾವ ಮೂಡುವಂತೆ ಮಾಡುತ್ತವೆ. ಹುಡುಗರಲ್ಲಿ ಇಂಥ ಭಾವನೆ ಮೂಡುವುದನ್ನು ತಡೆಯಬೇಕು. ಮಕ್ಕಳು ಸಂಬಂಧಗಳನ್ನು ಗೌರವಿಸುವುದನ್ನು ಕಲಿಯಬೇಕಾದರೆ ಲೈಂಗಿಕ ವಿಚಾರಗಳ ಕುರಿತು ಶಿಕ್ಷಣ ಕೊಡುವ ಅಗತ್ಯವಿದೆ.

**ಮುಕ್ತ ಚರ್ಚೆ ಅಗತ್ಯ**

**-ಚಿತ್ರಾ ಸಿ.**
ಮಕ್ಕಳ ಆಪ್ತ ಸಮಾಲೋಚಕಿ

ಹಿಂದೆಯೇ ಮನವಿ ಸಲ್ಲಿಸಲಾಗಿತ್ತು. 'ಮನವಿಯನ್ನು ಸ್ವೀಕರಿಸಿದ ಅಂದಿನ ಸಚಿವರು, ಒರಟಾಗಿ ಟೀಕಿಸಿದ್ದಲ್ಲದೆ ಮನವಿಯನ್ನು ತಿರಸ್ಕರಿಸಿಬಿಟ್ಟರು' ಎಂದು 'ಚೈಲ್ಡ್ ರೈಟ್ಸ್ ಟ್ರಸ್ಟ್'ನ ಕಾರ್ಯಕಾರಿ ನಿರ್ದೇಶಕ ಎನ್.ವಿ. ವಾಸುದೇವ ಶರ್ಮಾ ನೆನಪಿಸಿಕೊಳ್ಳುತ್ತಾರೆ.

ಪ್ರೌಢಶಾಲೆಯಲ್ಲಿ ಗಣಿತ, ವಿಜ್ಞಾನದ ವಿಷಯಗಳಂತೆಯೇ ಸೆಕ್ಷುವಾಲಿಟಿ ಎಜುಕೇಷನ್ ಎಂಬ ವಿಷಯವನ್ನೂ ಬೋಧಿಸಬೇಕು. ಗಣಿತ–ವಿಜ್ಞಾನದ ಅಂಕಗಳನ್ನು ಗಳಿಸಿ ಉನ್ನತ ಹುದ್ದೆಗಳನ್ನು ಸಂಪಾದಿಸುವ ವ್ಯಕ್ತಿಯ ಆದಾಯ ಚೆನ್ನಾಗಿರಬಹುದು. ಆದರೆ ಅವನ ಮನಸ್ಸು ಚೆನ್ನಾಗಿಲ್ಲದೇ ಇದ್ದರೆ, ಕೇವಲ ಹಣದಿಂದ ಏನು ಪ್ರಯೋಜನ? ಸಹಜೀವಿಯೊಡನೆ ಹೇಗೆ ವರ್ತಿಸಬೇಕು ಎಂಬ ಅರಿವು ಇಲ್ಲದ ವ್ಯಕ್ತಿ ತನ್ನ ಗಳಿಕೆಯನ್ನು ಹೇಗೆ ತಾನೇ ಖರ್ಚು ಮಾಡಬಲ್ಲ? ಜೀವನವನ್ನು ಹೇಗೆ ಸುಂದರಗೊಳಿಸಬಲ್ಲ? ಇಂಥ ಪ್ರಶ್ನೆಗಳು ಹೆತ್ತವರಲ್ಲಿ ಮೂಡಬೇಕು.

'ಲೈಂಗಿಕ ವಿಚಾರಗಳ ಬಗ್ಗೆ ಪೋಷಕರು ಮಕ್ಕಳೊಡನೆ ಮಾತನಾಡಬೇಕು. ಬಚ್ಚಿಟ್ಟರೆ ಕುತೂಹಲ, ಭ್ರಮೆಗಳು ಹೆಚ್ಚುತ್ತಾ ಹೋಗುತ್ತವೆ. ಶಾಲೆಗಳಲ್ಲಿ ಹಿಂದೆಲ್ಲ ನೈತಿಕ ಶಿಕ್ಷಣ ಎಂಬ ವಿಷಯ ಬೋಧಿಸಲಾಗುತ್ತಿತ್ತು. ಈಗ ಅದನ್ನು ಕೈಬಿಡಲಾಗಿದೆ. ಹಾಗಾಗಿ ಶಿಕ್ಷಣದಲ್ಲಿ ಲೈಂಗಿಕ ವಿಚಾರಗಳ ಬಗ್ಗೆ ಗಂಡು ಮತ್ತು ಹೆಣ್ಣುಮಕ್ಕಳಿಗೆ ತಿಳಿಹೇಳುವ ಅಗತ್ಯ ಇಂದು ಬಹಳ ಜರೂರು' ಎಂದು ವಾಸುದೇವ ಶರ್ಮಾ ಹೇಳುತ್ತಾರೆ. ಅವರು ಹೇಳುವ ಪ್ರಕಾರ, ಸೆಕ್ಷುವಾಲಿಟಿ ಎಜುಕೇಷನ್ ಎನ್ನುವುದು ನೇರವಾದ ಪಠ್ಯವಾಗಿರದೆ, ಮಕ್ಕಳು ಓದುವ ಪಠ್ಯಪುಸ್ತಕಗಳಲ್ಲಿ ಅದು ಅಂತರ್ಗತವಾಗಿರಬೇಕು. ಉದಾಹರಣೆಗೆ, ಗಣಿತದ ಪಾಠದಲ್ಲಿ ಒಂದು ಪ್ರಶ್ನೆ ಊಹಿಸಿಕೊಳ್ಳಿ: ಒಂದು ಹೋಟೆಲ್‌ನಲ್ಲಿ ಹದಿನೈದು ಮಂದಿ ಕೆಲಸಗಾರರಿದ್ದರು. ಅವರ

